**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಶಾಹಾಪೂರ**
**ಸಿ.ಸಿ ನಂಃ 672/ 2020**

| | | |
|---|---|---|
| ಸಾಕ್ಷಿಯ ಹೆಸರುಃ | ಗೋವಿಂದ | ಪ್ರಾಸಾಃ 02 |
| ತಂದೆ/ಗಂಡನ ಹೆಸರುಃ | ತೇಜು | ಚಾಸಾಃ 02 |
| ವಯಸ್ಸುಃ | 35 ವರ್ಷ | ದಿಃ 15-12-2023 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಚಂದಾಪೂರ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಚಾಸಾ 3 ರವರ ಪರಿಚಯ ಇರುತ್ತದೆ. ಸುಮಾರು 3 ವರ್ಷಗಳ ಹಿಂದೆ ಆರೋಪಿತರು ರೈತರ ಹೊಲದಲ್ಲಿ ಸರಬರಾಜು ಆಗುವ ವಿದ್ಯುತ ಕಂಬವನ್ನು ಮುರಿದಿರುವದರಿಂದ ಘಟನಾ ಸ್ಥಳದಲ್ಲಿ ಪೋಲಿಸರು ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಗುನ್ನೆ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ. ಗುನ್ನೆ ಸ್ಥಳದ ಪಂಚನಾಮೆಯನ್ನು ಸಾಃ 4.30 ರಿಂದ 5.30 ವರೆಗೆ ಜರುಗಿಸಿರುತ್ತಾರೆ. ನಂತರ ಗುನ್ನೆ ಸ್ಥಳದ ಪಂಚನಾಮೆಯ ಕಾಲಕ್ಕೆ ನನ್ನ ಹಾಗೂ ಚಾಸಾ 1 ಮತ್ತು 3 ರವರ ಸಮಕ್ಷಮ ಗುನ್ನೆ ಸ್ಥಳದಲ್ಲಿ ಪೋಟೋವನ್ನು ತೆಗೆದಿರುತ್ತಾರೆ. ಗುನ್ನೆ ಸ್ಥಳದ ಜಾಗವನ್ನು ಚಾಸಾ 1 ರವರು ತೋರಿಸಿರುತ್ತಾರೆ. ಗುನ್ನೆ ಸ್ಥಳದ ಚಕಬಂದಿಯು ಪೂರ್ವಕ್ಕೆ ಅಮಲ್ಲಪ್ಪ ಪೂಜಾರಿ ಇವರ ಜಮೀನು, ಪಶ್ಚಿಮಕ್ಕೆ ಮಾನಪ್ಪ ಇವರ ಜಮೀನು, ಉತ್ತರಕ್ಕೆ ಮುತ್ತುಗೌಡ ರವರ ಜಮೀನು, ದಕ್ಷಿಣಕ್ಕೆ ಮಲ್ಲಣ್ಣಗೌಡ ಇವರ ಜಮೀನು ಇರುತ್ತದೆ. ಗುನ್ನೆ ಸ್ಥಳದ ಪಂಚನಾಮೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು 1 ಮತ್ತು 2 ನೇ ಆರೋಪಿತರ ಪರಃ ಶ್ರೀ ವಾಯ್.ಎಸ್. ವಕೀಲರವರಿಂದಃ**

ಪಂಚನಾಮೆಯ ಕಾಲಕ್ಕೆ ನನ್ನನ್ನು ಪೋಲಿಸರು ಮತ್ತು ಚಾಸಾ 1 ರವರು ಕರೆದಿರುತ್ತಾರೆ. ಪಂಚನಾಮೆಯನ್ನು ಪೋಲಿಸರು ಬರೆದಿರುತ್ತಾರೆ. ಪಂಚನಾಮೆಯಲ್ಲಿ ಕಂಬ ಮುರಿದಿರುವ ಬಗ್ಗೆ ಬರೆದಿರುತ್ತಾರೆ. ಪಂಚನಾಮೆಯ ಕಾಲಕ್ಕೆ ನಾನು, ಚಾಸಾ 3 ಹಾಗೂ ಪೋಲಿಸರು ಇದ್ದೆವು. ವಿದ್ಯುತ ಸರಬರಾಜು ಗೋಗಿ, ರಬನಳ್ಳಿ, ಕರಕಳ್ಳಿ ಮೂಲಕ ಚಂದಾಪೂರಕ್ಕೆ ಹೊಗಿರುತ್ತದೆ. ಸರ್ವೆ ನಂ. 105/2 ದಾಟಿದ ನಂತರ ನಮ್ಮ ಜಮೀನು ಬರುತ್ತದೆ. ಘಟನಾ ಸ್ಥಳದಲ್ಲಿ ಎರಡು ವಿದ್ಯುತ ಕಂಬಗಳು ಬೇರೆ

ಬೇರೆ ಇದ್ದವು. ವಿದ್ಯುತ ಕಂಬವು ಬದುವಿನ ಮೇಲೆ ಇತ್ತು. ನನ್ನ ಹಾಗೂ ಚಾಸಾ 3 ರವರ ಸಮಕ್ಷಮದಲ್ಲಿ ಗುನ್ಹೆ ಸ್ಥಳದ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು 3 ನೇ ಆರೋಪಿತನ ಪರಃ ಶ್ರೀ ವಿ.ಆರ್.ಡಿ. ವಕೀಲರವರಿಂದಃ**

ಸರ್ವೆ ನಂ. 105/2 ರ ಪೂರ್ವದಕಡೆಗೆ ನಮ್ಮ ಜಮೀನು ಬರುತ್ತದೆ. ನಾನು ಗುನ್ಹೆ ಸ್ಥಳದ ಪಂಚನಾಮೆಯ ಕಾಲಕ್ಕೆ ಸಹಿಯನ್ನು ಮಾಡಿರುತ್ತೇನೆ. ಪಂಚನಾಮೆಯ ಮಾಡುವ ಕಾಲಕ್ಕೆ ಪೋಲಿಸರು ಪೋಟೋಗಳನ್ನು ತೆಗೆದಿರುತ್ತಾರೆ. ಸರ್ವೆ ನಂ. 105/2 ರ ಪಶ್ಚಿಮದಕಡೆಗೆ ಚಾಸಾ 3 ರವರ ಜಮೀನು ಬರುತ್ತದೆ. ಪಂಚನಾಮೆಯ ಕಾಲಕ್ಕೆ ನಾನು ಮತ್ತು ಚಾಸಾ 3 ರವರು ಇರಲಿಲ್ಲ ಮತ್ತು ಅಲ್ಲಿ ಯಾವು ಕಂಬಗಳು ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು**
**ಶಾಹಾಪೂರ**